# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಆರ್.ಎಸ್.ಶೇಖರ್, ಸಹಾಯಕ ಕೃಷಿ ನಿರ್ದೇಶಕರು, ಕೊಪ್ಪ ಹಾಗೂ ಶ್ರೀ.ಎನ್.ವಿ.ಮುರಳಿಕೃಷ್ಣ,ಸಹಾಯಕ ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ಕಸಬಾ, ಚಿಕ್ಕಮಗಳೂರು ಜಿಲ್ಲೆ. ಇವರ ಕರ್ತವ್ಯ ಲೋಪದ ಬಗ್ಗೆ-ಶಿಸ್ತು ಕ್ರಮ

ಓದಲಾಗಿದೆ:

1) ಆಯುಕ್ತರು, ಕೃಷಿ ಇಲಾಖೆ, ಇವರ ಪತ್ರ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-1/07/2010-11,ದಿನಾಂಕ:03-01-2011.
2) ಸರ್ಕಾರದ ಕಾರಣ .ಕೇಳುವ ಪತ್ರದ ಸಂಖ್ಯೆ: ಕೃತೋಇ 42 ಕೃಪವಿ 2010, ದಿನಾಂಕ: 03-08-2011.
3) ಸರ್ಕಾರದ ಆದೇಶ ಸಂಖ್ಯೆ: ಕೃಇ 42 ಕೃಪವಿ 2010, ದಿನಾಂಕ:03-12-2012.
4) ವಿಚಾರಣಾಧಿಕಾರಿಯವರ ವರದಿ ದಿನಾಂಕ:26-06-2013.

*********

ಪ್ರಸ್ತಾವನೆ:

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನಲ್ಲಿ 2009-10 ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಮತ್ತು ಕೃಷಿ ಯಾಂತ್ರೀಕರಣ ಯೋಜನೆಯಲ್ಲಿ ಅರ್ಹ ರೈತರುಗಳಿಗೆ ಮಾನವ ಚಾಲಿತ ಕೃಷಿ ಉಪಕರಣಗಳನ್ನು ಸಮರ್ಪಕವಾಗಿ ವಿತರಿಸುವಲ್ಲಿ ಇಲಾಖೆಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು, ಇವರು ಕಳುಹಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಕ್ರಮಾಂಕ (2) ರಲ್ಲಿ ಓದಲಾದ ದಿನಾಂಕ/03/08/2011ರ ಕಾರಣ ಕೇಳುವ ಪತ್ರವನ್ನು ಆಪಾದನಾ ಪಟ್ಟಿಯೊಂದಿಗೆ ಕೆಳಕಂಡ ಅಧಿಕಾರಿಗಳಿಗೆ ಜಾರಿಮಾಡಲಾಗಿತ್ತು.

1) ಶ್ರೀ ಆರ್.ಎಸ್.ಶೇಖರ್, ಸಹಾಯಕ ಕೃಷಿ ನಿರ್ದೇಶಕರು, ಕೊಪ್ಪ.
2) ಶ್ರೀ.ಎನ್.ವಿ.ಮುರಳಿಕೃಷ್ಣ, ಸಹಾಯಕ ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ಕಸಬಾ, ಚಿಕ್ಕಮಗಳೂರು ಜಿಲ್ಲೆ.

ಮೇಲ್ಕಂಡ ಅಧಿಕಾರಿಗಳು ತಮಗೆ ಜಾರಿಮಾಡಿದ ಕಾರಣ ಕೇಳುವ ಪತ್ರಕ್ಕೆ ಸಲ್ಲಿಸಿದ ಲಿಖಿತ ಹೇಳಿಕೆಗಳಲ್ಲಿ ತಮ್ಮ ಮೇಲಿನ ಆರೋಪಗಳನ್ನು ತಳ್ಳಿಹಾಕಿದಿರುದ್ದರಿಂದ ಸದರಿ ಪ್ರಕರಣದಲ್ಲಿಯ ಸತ್ಯಾ-ಸತ್ಯತೆಯನ್ನು ತಿಳಿದುಕೊಳ್ಳುವ ಸಲುವಾಗಿ ಮೇಲೆ ಕ್ರಮಾಂಕ:(3) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ.ಕೆ.ರಾಧಾಕೃಷ್ಣ ಹೊಳ್ಳ, ನಿವೃತ್ತ ಜಿಲ್ಲಾ ಮತ್ತು ಸೇಶನ್ಸ್ ನ್ಯಾಯಾಧೀಶರು, ಬೆಂಗಳೂರು,

ಇವರನ್ನು ವಿಚಾರಣಾಧಿಕಾರಿಯಾಗಿ ಹಾಗೂ ಅಧೀಕ್ಷಕರು, ಜಂಟಿ ಕೃಷಿ ನಿರ್ದೇಶಕರ ಕಛೇರಿ, ಚಿಕ್ಕಮಗಳೂರು, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಕ್ರಮಾಂಕ (4)ರಲ್ಲಿ ಓದಲಾದ ಪತ್ರದಲ್ಲಿ ಪ್ರಕರಣದ ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಅವರು ತಮ್ಮ ವರದಿಯಲ್ಲಿ ಆಪಾದಿತ ಅಧಿಕಾರಿ/ನೌಕರರ ವಿರುದ್ಧದ ಆರೋಪಗಳು ರುಜುವಾತಾಗಿರುವುದಿಲ್ಲವೆಂದು ನಿರ್ಣಯ ನೀಡಿರುತ್ತಾರೆ. ವಿಚಾರಣಾ ವರದಿಯ ವಿವರ ಈ ಕೆಳ ಕಂಡಂತಿರುತ್ತದೆ.

"ಪ್ರಕರಣದಲ್ಲಿ ಇಬ್ಬರು ಆಪಾದಿತ ಅಧಿಕಾರಿ/ನೌಕರರ ಆರೋಪಗಳನ್ನು ರುಜುವಾತುಪಡಿಸುವಲ್ಲಿ ವಿಚಾರ ಮಾಡಿದ ಇಬ್ಬರು ಸಾಕ್ಷಿಗಳ ಹೇಳಿಕೆಗಳನ್ನು ಹಾಗೂ ಇಬ್ಬರು ಆಪಾದಿತ ಅಧಿಕಾರಿ/ನೌಕರರು ಹಾಜರುಪಡಿಸಿದ ಲಿಖಿತವಾದವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, 1ನೇ ಸಾಕ್ಷಿ ತನ್ನ ಹೇಳಿಕೆಯಲ್ಲಿ ಕೃಷಿ ಪರಿಕರ ಹಾಗೂ ಉಪಕರಣಗಳು ವಿತರಣೆಯಾದ ದಿನದಂದು ಅವರು ರಜೆಯಲ್ಲಿದ್ದರು, ಮರು ದಿನ ಅವರು ಕಛೇರಿಗೆ ಬಂದಾಗ ಘಟನೆಯ ಬಗ್ಗೆ ಅವರಿಗೆ ತಿಳಿದು ಬಂತು ಎಂದು ಹೇಳಿರುತ್ತಾರೆ. ಅವರ ಪ್ರಕಾರ ದಿನಾಂಕ:25-05-2010 ರ ದಿನ ಪತ್ರಿಕೆಯಲ್ಲಿ ಕೃಷಿ ಇಲಾಖೆ, ಕೊಪ್ಪದಲ್ಲಿ ಕೃಷಿ ಪರಿಕರಗಳು ವಿತರಣೆಯಲ್ಲಿ ಲೋಪವಾಗಿರುತ್ತದೆ. ಆಗ ರೈತರು ಕೃಷಿ ಇಲಾಖೆ ಮುಂದೆ ಧರಣಿ ನಡೆಸಿದ್ದರು ಎಂಬುದಾಗಿ ವರದಿ ಆಗಿತ್ತು. ಅವರು ತನ್ನ ಮುಖ್ಯ ವಿಚಾರಣೆಯಲ್ಲಿ ಮರು ದಿನ ಅವರು ಕಛೇರಿಗೆ ಬಂದು ವಿಚಾರಿಸಿದಾಗ ಆ ರೀತಿ ಯಾವುದೇ ತರಹದ ಘಟನೆಗಳು ನಡೆದಿಲ್ಲ ಎಂಬುದುದಾಗಿ ತಿಳಿದು ಬಂತು ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಅದೂ ಅಲ್ಲದೇ ಅವರು ತನ್ನ ಮುಖ್ಯ ವಿಚಾರಣೆಯಲ್ಲಿ ಕೃಷಿಕರಿಗೆ ಎಲ್ಲಾ ಪರಿಕರಗಳನ್ನು ನೀಡಲಾಗಿತ್ತು ಎಂಬುದಾಗಿಯೂ ಹೇಳಿರುತ್ತಾರೆ. ಈ ಹೇಳಿಕೆಯನ್ನು ಪರಿಶೀಲಿಸಲಾಗಿ ಆರೋಪದಲ್ಲಿ ನಮೂದಿಸಲಾದಂತೆ ಲೋಪದೋಷಗಳು ಆಗಿವೆ ಎಂಬುದನ್ನು ಒಪ್ಪಲು ಬರುವುದಿಲ್ಲ ಎಂಬುದಾಗಿ ವರದಿ ನೀಡಿರುವರು.

ಅವರು ತನ್ನ ಪಾಟಿ ಸವಾಲಿನಲ್ಲಿ ಕೃಷಿ ಉಪಕರಣಗಳನ್ನು ವಿತರಣೆ ಮಾಡುವ ವಿಚಾರದಲ್ಲಿ ದೂರು ಪ್ರಕಟಣೆಯಾಗಿದ್ದು, ಮತ್ತು ಯಾವುದೇ ದಾಖಲಾತಿಗಳನ್ನು ಪಡೆಯದೇ

ಕೃಷಿಕರಿಗೆ ಕೃಷಿ ಉಪಕರಣಗಳನ್ನು ಕೊಡಬೇಕಾಗಿತ್ತು ಎಂಬುದಾಗಿ ಪ್ರಕಟಣೆಯಲ್ಲಿ ತಿಳಿಸಿದ್ದು ಮತ್ತು ಆ ಬಗ್ಗೆ ಕೃಷಿಕರು ಆ ದಿನ ಗಲಾಟೆ ಮಾಡಿರುವುದಾಗಿ ಹೇಳಿರುತ್ತಾರೆ. ಅವರು ತನ್ನ ಪಾಟಿ ಸವಾಲಿನಲ್ಲಿ ಇಲಾಖೆಯ ಸುತ್ತೋಲೆ ಪ್ರಕಾರ ಕೃಷಿಕರಿಗೆ ಯಾವುದೇ ಕೃಷಿ ಉಪಕರಣಗಳನ್ನು ಕೋಡಬೇಕಾಗಿದ್ದಲ್ಲಿ ಅವರುಗಳಿಂದ ಅರ್ಜಿಯನ್ನು ಪಡೆದು ಅವರು ಸಂಬಂಧಪಟ್ಟ ಮಾಹಿತಿ ಪಡೆದು ನೀಡಬೇಕೆಂದು ತಿಳಿಸಿರುವುದು ನಿಜ, ಮತ್ತು ಮಾರ್ಗಸೂಚಿಯು ನಿ.ಡಿ. 1 ಆಗಿರುತ್ತದೆ. ಹೀಗಿರುವಾಗ ದಾಖಲಾತಿಗಳನ್ನು ಪಡೆಯದೆ ಉಪಕರಣಗಳನ್ನು ಕೊಡಲು ಕಾನೂನಿನಡಿ ಅವಕಾಶ ಇರುವುದಿಲ್ಲ. ಆದೂ ಅಲ್ಲದೆ, ಅರ್ಜಿ ಕೊಟ್ಟರೂ ಕೃಷಿ ಉಪಕರಣಗಳನ್ನು ಕೊಟ್ಟಿಲ್ಲ ಎಂಬುದಾಗಿ ಯಾವ ಒಬ್ಬ ಕೃಷಿಕನು ದೂರನ್ನು ಸಲ್ಲಿಸಿರುವುದಿಲ್ಲ ಎಂಬುದನ್ನು 1ನೇ ಸಾಕ್ಷಿ ತನ್ನ ಪಾಟಿ ಸವಾಲಿನಲ್ಲಿ ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. 1ನೇ ಸಾಕ್ಷಿಯ ಹೇಳಿಕೆಯಿಂದ ಈ ಇಬ್ಬರು ಆಪಾದಿತ ಅಧಿಕಾರಿ/ನೌಕರರುಗಳ ಮೇಲೆ ಮಾಡಿದಂತಹ ಆರೋಪದಲ್ಲಿ ಸತ್ಯಾಂಶವಿರುವುದಿಲ್ಲವೆಂದು ವರದಿ ನೀಡಿರುತ್ತಾರೆ.

2ನೇ ಸಾಕ್ಷಿಯು 2008-09, 2009-10, 2010-11ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಜಂಟಿ ಕೃಷಿ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದರು. ಆ ಸಮಯದಲ್ಲಿ ಅವರು ಕೃಷಿ ಇಲಾಖೆಯಿಂದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಮತ್ತು ಕೃಷಿ ಆಧುನೀಕರಣ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿತ್ತು. ಆ ಯೋಜನೆ ಅಡಿಯಲ್ಲಿ ರೈತರಿಗೆ ಕೃಷಿ ಉಪಕರಣಗಳನ್ನು ರಿಯಾಯಿತಿ ದರದಲ್ಲಿ ಕೊಡುವ ಕಾರ್ಯಕ್ರಮವಿತ್ತು ಎಂಬುದಾಗಿ ತನ್ನ ಹೇಳಿಕೆಯಲ್ಲಿ ಹೇಳಿರುತ್ತಾರೆ. ಅವರು ತನ್ನ ಮುಖ್ಯ ವಿಚಾರಣೆಯಲ್ಲಿ ದಿನಾಂಕ:25-05-2010 ಮತ್ತು ದಿನಾಂಕ:27-05-2010 ರ ವಿಜಯ ಕರ್ನಾಟಕ, ದಿನಪತ್ರಿಕೆಯಲ್ಲಿ, ಸಹಾಯಕ ಕೃಷಿ ನಿರ್ದೇಶಕರು, ಕೊಪ್ಪದಲ್ಲಿ ಉಪಕರಣಗಳನ್ನು ವಿವಿಧ ರೀತಿಯಲ್ಲಿ ವಿತರಣೆ ಮಾಡುತ್ತಿಲ್ಲವೆಂಬುದಾಗಿ ಪ್ರಕಟವಾಗಿತ್ತು. ಆ ಕಾರಣ ಸಹಾಯಕ ಕೃಷಿ ನಿರ್ದೇಶಕರು, ಕೊಪ್ಪ ಕಛೇರಿಗೆ ಅವರು ಭೇಟಿ ನೀಡಿದ್ದರು. ಹಾಗೆಯೇ ಮಾರ್ಗಸೂಚಿ ಪ್ರಕಾರ ಎಲ್ಲಾ ದಾಖಲಾತಿಗಳನ್ನು ಪಡೆದು ಆ ನಂತರ ಉಪಕರಣಗಳನ್ನು ವಿತರಣೆ ಮಾಡತಕ್ಕದೆಂದು ಅವರು ಕಛೇರಿಯಲ್ಲಿ ತಿಳಿಸಿದ್ದಾರೆ ಆದರ ಪ್ರಕಾರ ಆ ವಿತರಣೆಯಲ್ಲಿ ಯಾವುದೇ ಅವ್ಯವಹಾರ ಆಗಿಲ್ಲ ಎಂಬುದಾಗಿ ಹೇಳಿರುತ್ತಾರೆ. ಮತ್ತು ಮಾರ್ಗಸೂಚಿಗೆ ವಿರುದ್ಧವಾಗಿ ಯಾವುದೇ ಕೆಲಸವಾಗಿಲ್ಲ ಹಾಗೂ ಕೃಷಿ ಸಲಕರಣೆಗಳು ವಿತರಣೆಯಲ್ಲಿ ಅವ್ಯವಹಾರವಾಗಿಲ್ಲ ಎಂಬುದಾಗಿ ಸ್ಪಷ್ಟವಾಗಿ ಕಂಡುಬರುತ್ತದೆ ಎಂಬುದಾಗಿ ಹೇಳಿಕೆ ನೀಡಿರುವುದಲ್ಲದೇ ತಮ್ಮ ಪಾಟಿ ಸವಾಲಿನಲ್ಲಿ ಪ್ರತಿ

ಒಬ್ಬ ರೈತರಿಂದ ದಾಖಲೆಯನ್ನು ಪಡೆದು ಅವುಗಳನ್ನು ಪರಿಶೀಲಿಸಿ ನಂತರ ಉಪಕರಣಗಳನ್ನು ಕೊಡುವಾಗ ವಿಳಂಬವಾಗಿರುತ್ತದೆ. ಯಾವುದೇ ಅವ್ಯವಹಾರ ಆಗಿಲ್ಲದೇ ಇದ್ದುದರಿಂದ ಎಚ್ಚರವಹಿಸಬೇಕೆಂದು ನಾನು ಅವರುಗಳಿಗೆ ಬಾಯಿ ಮಾತಿನಲ್ಲಿ ತಿಳಿಸಲಾಗಿದೆ. ಈ ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿದಾಗ ಕೃಷಿ ಉಪಕರಣಗಳು ವಿತರಣೆಯಲ್ಲಿ, ಪತ್ರಿಕೆಗಳಲ್ಲಿ ವರದಿಯಾದ ಪ್ರಕಾರ ಯಾವುದೇ ಅವ್ಯವಹಾರ ನಡೆದಿಲ್ಲ ಎಂಬುದಾಗಿ ಸ್ಪಷ್ಟವಾಗಿ ಕಂಡುಬರುತ್ತದೆ. ಅವರ ಹೇಳಿಕೆಯನ್ನು ಪರಿಶೀಲಿಸಿದಾಗ ವಿತರಣೆ ಮಾಡಿದಂತಹ ಕೃಷಿ ಉಪಕರಣಗಳ ಬಗ್ಗೆ ಮಾರ್ಗಸೂಚಿ ಪ್ರಕಾರ ಪಡೆದುಕೊಳ್ಳಬೇಕಾಗಿದ್ದ ದಾಖಲಾತಿಗಳನ್ನು ಸಂಬಂಧಪಟ್ಟವರಿಂದ ಪಡೆದುಕೊಳ್ಳಲಾಗಿದೆ ಎಂಬುದು ಕಂಡುಬಂದಿದ್ದು, ಅವರುಗಳು ಮಾರ್ಗಸೂಚಿಗೆ ವ್ಯತಿರಿಕ್ತವಾಗಿ ನಡೆದುಕೊಂಡಿದ್ದಾರೆಂಬುದಾಗಿ ಕಂಡುಬರುವುದಿಲ್ಲ. ಆದ್ದರಿಂದ ಸದರಿ ಪ್ರಕರಣದಲ್ಲಿನ ಆರೋಪಿತರ ಮೇಲಿನ ಆರೋಪಗಳು ರುಜುವಾತಾಗಿಲ್ಲವೆಂದು ವಿಚಾರಣಾಧಿಕಾರಿಗಳು ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ವಿಚಾರಣಾಧಿಕಾರಿಯವರು ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿದ್ದು ವಿಚಾರಣೆಯನ್ನು ನಿಯಮಾನುಸಾರ ನಡೆಸಿ ಆರೋಪದ ಕುರಿತಂತೆ ಸಾಕ್ಷ್ಯಾಧಾರಗಳ ಸಹಿತ ಸಮರ್ಪಕವಾಗಿ ಚರ್ಚಿಸಿ ನಿರ್ಣಯ ದಾಖಲಿಸಿರುವುದರಿಂದ ಸದರಿ ವಿಚಾರಣಾ ವರದಿಯನ್ನು ಒಪ್ಪಿ ವಿಚಾರಣೆಗೆ ಗುರಿಪಡಿಸಿದ ಈರ್ವರನ್ನು ಆರೋಪಗಳಿಂದ ಮುಕ್ತರನ್ನಾಗಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ

**ಸರ್ಕಾರದ ಆದೇಶ ಸಂಖ್ಯೆ: ಕೃಇ 42 ಕೃಪವಿ 2010**
**ಬೆಂಗಳೂರು, ದಿನಾಂಕ:13/12/2013**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ, ಚಿಕ್ಕಮಗಳೂರು ಜಿಲ್ಲೆಯ, ಕೊಪ್ಪ ತಾಲ್ಲೂಕಿನಲ್ಲಿ 2009-10 ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಮತ್ತು ಕೃಷಿ ಯಾಂತ್ರೀಕರಣ ಯೋಜನೆಯಲ್ಲಿ ಅರ್ಹ ರೈತರುಗಳಿಗೆ ಮಾನವ ಚಾಲಿತ ಕೃಷಿ ಉಪಕರಣಗಳನ್ನು ಸಮರ್ಪಕವಾಗಿ ವಿತರಿಸುವಲ್ಲಿ ಇಲಾಖೆಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುತ್ತಾರೆಂಬ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧದ ಆರೋಪಗಳು ಇಲಾಖಾ

907



ವಿಚಾರಣೆಯಲ್ಲಿ ರುಜುವಾತಾಗದ ಕಾರಣ ಅವರನ್ನು ಅವರ ಮೇಲಿನ ಆರೋಪಗಳಿಂದ ದೋಷಮುಕ್ತರನ್ನಾಗಿ ಮಾಡಿ ಆದೇಶಿಸಿದೆ.

1) ಶ್ರೀ ಆರ್.ಎಸ್.ಶೇಖರ್, ಸಹಾಯಕ ಕೃಷಿ ನಿರ್ದೇಶಕರು, ಕೊಪ್ಪ.

2) ಶ್ರೀ.ಎನ್.ವಿ.ಮುರಳಿಕೃಷ್ಣ, ಸಹಾಯಕ ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ಕಸಬಾ, ಚಿಕ್ಕಮಗಳೂರು ಜಿಲ್ಲೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ.

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.

2) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.

3) ಶ್ರೀ.ಕೆ.ರಾಧಾಕೃಷ್ಣ ಹೊಳ್ಳ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ನಂ.180, ಲಿಂಕ್ ರೋಡ್, ಮಲ್ಲೇಶ್ವರಂ, ಬೆಂಗಳೂರು-560 003.

4) ಮಾನ್ಯ ಕೃಷಿ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.

5) ಸಂಬಂಧಿಸಿದ ಅಧಿಕಾರಿಗಳು (ಆಯುಕ್ತರು, ಕೃಷಿ ಇಲಾಖೆ, ಇವರ ಮೂಲಕ).

6) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.

7) ಸರ್ಕಾರದ ಉಪ ಕಾರ್ಯದರ್ಶಿಗಳು, ಕೃಷಿ ಇಲಾಖೆ,

8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.